© 2022 IJNRD | Volume 7, Issue 5 May 2022 | ISSN: 2456-4184 | IJNRD.ORG

IJNRD.ORG ISSN : 2456-4184
INTERNATIONAL JOURNAL OF NOVEL RESEARCH AND DEVELOPMENT (IJNRD) | IJNRD.ORG
An International Open Access, Peer-reviewed, Refereed Journal

# ಆಧುನಿಕೋತ್ತರ ಕಾಲಘಟ್ಟ : ಕನ್ನಡ ಸಣ್ಣಕತೆ–ವಸ್ತು ವಿಷಯ

**ನರಸಿಂಹ ಸ್ವಾಮಿ. ಎಸ್**
**ಸಂಶೋಧನಾ ವಿದ್ಯಾರ್ಥಿ,**
ಕನ್ನಡ ವಿಭಾಗ,
ರೇವ ವಿಶ್ವವಿದ್ಯಾಲಯ,
ರುಕ್ಮಿಣಿ ನಾಲೆಡ್ಜ್ ಪಾರ್ಕ್, ಕಟ್ಟಿಗೇನಹಳ್ಳಿ,
ಯಲಹಂಕ, ಬೆಂಗಳೂರು–560064

**ಮಾರ್ಗದರ್ಶಕರು : ಡಾ. ಜಗದೀಶ್ ಬಾಬು ಬಿ.ವಿ**

**ಆಧುನಿಕೋತ್ತರ** – 'ಪೋಸ್ಟ್ ಮಾರ್ಡನಿಸಮ್' ಎನ್ನುವ ಹೆಸರು ಆಧುನಿಕತೆಯ ನಂತರದ ಸಂದರ್ಭವನ್ನು ಕುರಿತು ಹೇಳುವಂತದ್ದು. ಯಾವುದನ್ನು ಹಿಂದೊಮ್ಮೆ ನಾವು ವಸಾಹತುಶಾಹಿ ಸಂದರ್ಭದಲ್ಲಿ 'ಆಧುನಿಕತೆ' ಎಂದು ತಿಳಿದೆವೋ, ಅಂತಹ ಆಧುನಿಕತೆಯನ್ನು ಕೂಡ ಮೀರಿ ಬೆಳೆದಿರುವಂತದ್ದು. ಆಧುನಿಕೋತ್ತರ ಅದೊಂದು ಸಿದ್ಧಾಂತವೂ ಹೌದು, ಇವೊತ್ತಿನ ಕಾಲದ, ಬದುಕಿನ ಸ್ಥಿತಿಯೂ ಕೂಡ ಹೌದು. "ಈ ಆಧುನಿಕೋತ್ತರವು ನಾವು ಬದುಕುತ್ತಿರುವ ಜಗತ್ತನ್ನೂ ಚಿಂತಿಸುವ ಚಿಂತನೆಗಳನ್ನು ಮಾಡುವ ಕೆಲಸಗಳನ್ನು ಆಕ್ರಮಿಸುತ್ತದೆ. ನಾವು ತಿಳಿದಿರುವುದನ್ನೂ, ತಿಳಿಯಲಾರದ್ದನ್ನೂ ಹಾಗೂ ನಮಗೆ ಗೊತ್ತಿರುವುದನ್ನೂ ಮತ್ತು ಗೊತ್ತಾಗಲು ಸಾಧ್ಯವಿಲ್ಲದಂಥದನ್ನೂ, ಅಂದರೆ ನಮ್ಮ ಸ್ಥಿತಿ–ಸ್ವರೂಪಗಳೆರಡರ ಪರಿಯನ್ನೂ ಅದು ನಿಯಂತ್ರಿಸತೊಡಗಿದೆ." ಆಧುನಿಕೋತ್ತರವೆಂಬುದು ಎಲ್ಲವನ್ನೂ ಒಳಗೊಂಡಂತೆ, ಎಲ್ಲರನ್ನೂ ಒಳಗೊಂಡಂತೆ, ಎಲ್ಲರ ಪರವಾಗಿರುವಂತೆ, ಎಲ್ಲವೂ ತಾನೇ ಎಂಬಂತೆ ಕಾಣಿಸುತ್ತದೆ.

ಜಗತ್ತಿನಲ್ಲಿ ನಡೆದ ಎರಡು ಮಹಾಯುದ್ಧಗಳ ತರುವಾಯ ಅದರ ಪರಿಣಾಮಗಳು ಜಗತ್ತನ್ನು ತಲ್ಲಣಗೊಳಿಸಿದವು. ಸ್ಥಗಿತಗೊಂಡಂತಿದ್ದ ಆಧುನೀಕರಣ ಪ್ರಕ್ರಿಯೆಯು ಮತ್ತೆ ಚಾಲ್ತಿಗೆ ಬಂದು ಬಹಳ ವೇಗವಾಗಿ ಎಲ್ಲಾ ರಾಷ್ಟ್ರಗಳಲ್ಲಿ ಅಭಿವೃದ್ಧಿಯ ಪ್ರಕ್ರಿಯೆಗಳು ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮತ್ತೆ ಆರಂಭಗೊಂಡವು. 21ನೇ ಶತಮಾನದ ವೇಳೆಗೆ ರಾಷ್ಟ್ರಗಳು ಮುಖ್ಯವಾಹಿನಿಗೆ ಸೇರಲು ತಮ್ಮಲ್ಲಿಯೇ ಪರಸ್ಪರ ಪೈಪೋಟಿ ಎದುರಿಸಬೇಕಾಯಿತು. ಇದಕ್ಕೆ ಪೂರಕವಾಗಿ ವಿಶ್ವದ ವ್ಯಾಪಾರ ವಹಿವಾಟಿನಲ್ಲಿ ಹೊಸ ಹೊಸ ವಿವೇಚನೆಗಳು ಪ್ರಾರಂಭವಾದವು. ನಂತರದ ದಶಕಗಳು ರಾಷ್ಟ್ರ ರಾಷ್ಟ್ರಗಳ ನಡುವೆ ಕೊಳು–ಕೊಡೆಗಳಿಗೆ ಮುಕ್ತವಾದ ಅವಕಾಶವನ್ನು ಕಲ್ಪಿಸಿಕೊಟ್ಟವು. ಈ ಪ್ರಕ್ರಿಯೆ ಸುಮಾರು 90ರ ದಶಕದ ಮಧ್ಯಭಾಗದ ವೇಳೆಗೆ ಸ್ಪಷ್ಟ ಸ್ವರೂಪವನ್ನು ಪಡೆಯಿತು.

ಭಾರತದಲ್ಲಿ ನೂತನ ಆರ್ಥಿಕ ನೀತಿಯ ಘೋಷಣೆಯ ನಂತರ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಪ್ರಕ್ರಿಯೆಗಳು ಪ್ರಬಲವಾಗಿ ಕಾಣಿಸಿಕೊಂಡವು. ತೀವ್ರ ಆರ್ಥಿಕ ಪ್ರಗತಿ ಸಾಧನೆಯೇ ಮುಖ್ಯ ಗುರಿಯಾಯಿತು. ಅಭಿವೃದ್ಧಿಶೀಲ ರಾಷ್ಟ್ರಗಳ ಜೊತೆಗೆ ಮಾಡಿಕೊಂಡ 'ಮುಕ್ತ ಮಾರುಕಟ್ಟೆಯ' ಒಪ್ಪಂದಗಳಿಂದ 'ಮಾರುಕಟ್ಟೆ ಸ್ಪರ್ಧೆ' ಎದುರಿಸುವಂತಾಯಿತು.

ಪೈಪೋಟಿಯನ್ನು ಅರಗಿಸಿಕೊಳ್ಳಲಾಗದ ರಾಷ್ಟ್ರಗಳು ಈ ಪ್ರವಾಹದಲ್ಲಿ ಸೇರಿಹೋದವು. ತೃತೀಯ ಜಗತ್ತಿನ ರಾಷ್ಟ್ರಗಳು ಈ ಎಲ್ಲಾ ಸವಾಲುಗಳನ್ನು ಎದುರಿಸಲಾಗದೇ ಬಸವಳಿದವು. ಅದಕ್ಕೆ ಬದಲಾದ ಪರ್ಯಾಯಗಳನ್ನು ಹುಡುಕುವ ಪ್ರಯತ್ನಗಳನ್ನು ಪ್ರಾರಂಭಿಸಿದವು.

ರಾಷ್ಟ್ರ ರಾಷ್ಟ್ರಗಳ ನಡುವೆ ವ್ಯಕ್ತಿಗಳ ಮತ್ತು ಜ್ಞಾನದ ವಿನಿಮಯ ಸ್ವರೂಪ ಪಡೆಯಬೇಕಿದ್ದದ್ದು ಸಾಂಸ್ಕೃತಿಕ ಆಕ್ರಮಣದ ಸ್ವರೂಪವನ್ನು ಪಡೆಯತೊಡಗಿತು. ಹೊಸ ಸಂಸ್ಕೃತಿಯ ಚಹರೆಗಳು ಅರ್ಥಹೀನವೆನಿಸಿದರೂ ಅವುಗಳ ಅನುಸರಣೆ ಮುಂದುವರೆಯುತ್ತಲೇ ಸಾಗಿತು. ಇದಕ್ಕೆ ತಕ್ಕಂತೆ ಸ್ವದೇಶಿ ಜನರ ಅಭಿರುಚಿಗಳು ಕೂಡ ಬದಲಾಗುತ್ತಲೇ ಹೋದವು. ಆರ್ಥಿಕ ಪ್ರಗತಿ ಒಂದೆಡೆಯಾದರೆ, ಮತ್ತೊಂದೆಡೆ ಸಾಂಸ್ಕೃತಿಕ ಚಹರೆಗಳು ನಾಶವಾಗತೊಡಗಿದವು. ನಾವು ನಮ್ಮ ಐಡೆಂಟಿಟಿಗಳನ್ನು ಕಳೆದುಕೊಂಡೆವು.

ಇಂದು ಈ ಜಾಗತೀಕರಣ, ಉದಾರೀಕರಣ, ಮುಕ್ತ ಮಾರುಕಟ್ಟೆ ಮುಂತಾದ ಸಂಗತಿಗಳು ಕೇವಲ ಆರ್ಥಿಕ ನೆಲೆಯಲ್ಲಿ ಮಾತ್ರವೇ ವಿವೇಚಿಸಬೇಕಾದ ಪರಿಭಾಷೆಗಳಾಗಿ ಉಳಿಯದೇ ನಮ್ಮ ಸಂಸ್ಕೃತಿಯ ಭಿನ್ನ ನೆಲೆಗಳನ್ನು ತಲುಪಿವೆ. ನಮ್ಮ ಜೀವನ ಮೌಲ್ಯಗಳ ಮೇಲೆ, ಆ ಮೂಲಕ ಸಾಹಿತ್ಯದ ಮೇಲೆ ಪರೋಕ್ಷ ಪರಿಣಾಮವನ್ನು ಬೀರುತ್ತಿವೆ. ಇವುಗಳ ವ್ಯಾಪ್ತಿ ಸಂಸ್ಕೃತಿಯ ವಲಯಗಳನ್ನು ಒಳಗೊಳ್ಳುತ್ತಿರುವುದರಿಂದ ಸಾಹಿತ್ಯವೂ ಸಹಜವಾಗಿಯೇ ಇವುಗಳಿಂದ ಪ್ರಭಾವಿತವಾಗದೇ ಉಳಿಯಲು ಸಾಧ್ಯವಿಲ್ಲ.

ಈ ನವವಸಾಹತುಶಾಹಿಯು ನಮ್ಮ ಬದುಕಿನ ಕ್ರಮಗಳನ್ನು ನಾವು ಊಹಿಸದೇ ಇರುವಷ್ಟು ಬದಲಾಯಿಸಿ ಬಿಟ್ಟಿದೆ. ನಮ್ಮ ಜೀವನ ಕ್ರಮಗಳನ್ನು ಛಿದ್ರಗೊಳಿಸುತ್ತಾ, ನಮ್ಮ ಸಾಮಾಜಿಕ ಸಂಬಂಧಗಳಲ್ಲಿ ಬದ್ಧತೆಯನ್ನು ಕಡಿಮೆಮಾಡಿದೆ. ಇವುಗಳೆಲ್ಲದರ ಪರಿಣಾಮಗಳನ್ನು ನಾವೇ ಎದುರಿಸಬೇಕಾಗಿದೆ. ಜಾಗತೀಕರಣ ಜಾಗತಿಕ ಬಂಡವಾಳಶಾಹಿಯ ಭಿನ್ನ ರೂಪ ಅಥವಾ ಹೊಸ ಅವತಾರವೇ ಆಗಿದೆ. ಸಮಾಜದ ದುಡಿವ ವರ್ಗದ ಸಾಮಾನ್ಯ ಜನರ ಜೀವನವನ್ನು ಕಸಿಯುವ ಶಕ್ತಿಯನ್ನಾಗಿ ನೋಡುವ ತಿರಸ್ಕೃತ ದೃಷ್ಟಿಯೊಂದಿಗೆ, ಈ ದೇಶದ ಹಲವು ದಲಿತ, ಕೆಳಜಾತಿ, ಕೆಳವರ್ಗದ ಸಮುದಾಯಗಳನ್ನು ಬಿಡುಗಡೆಗೊಳಿಸಬಲ್ಲ ಶಕ್ತಿಯೆಂದು ಒಪ್ಪಿತ ನಿಲುವಿನ ವಾದಗಳು ಇಂದು ಚಾಲ್ತಿಯಲ್ಲಿವೆ.

ಈ ದೃಷ್ಟಿಯಿಂದ ಆಧುನಿಕೋತ್ತರ ಕಾಲಘಟ್ಟದ ಸಾಹಿತ್ಯದ ಅಧ್ಯಯನವು ಒಂದು ರೀತಿಯಲ್ಲಿ ಜಾಗತೀಕರಣದ ಪ್ರಭಾವ ಪರಿಣಾಮಗಳನ್ನು ಸೃಜನಶೀಲ ಕೃತಿಗಳಲ್ಲಿ ಗುರುತಿಸುವ ಅಧ್ಯಯನವೇ ಆಗಿದೆ. ಈ ಹಿನ್ನಲೆಯಲ್ಲಿ ಆರಂಭವಾಗಿದ್ದ ಉದ್ಯಮ ಜಗತ್ತಿನ ಹಲವು ಚಿತ್ರಣಗಳು ನಮ್ಮ ಕಥನ ಪರಂಪರೆಯಲ್ಲಿವೆ.

ಆಧುನಿಕೋತ್ತರ ಸಂದರ್ಭದ ಭೌತಿಕ ಬದಲಾವಣೆಗಳು ಅಂದರೆ ಕಣ್ಣಿಗೆ ಗೋಚರವಾಗುವ ಬದಲಾವಣೆಗಳು ಹೇಗೆ ಮುಖ್ಯವೋ ಹಾಗೆಯೇ ಮಾನಸಿಕ ಸ್ತರದಲ್ಲಿ ಆಗಿರುವ ಬದಲಾವಣೆಗಳೂ ಕೂಡ ಅಷ್ಟೇ ಮುಖ್ಯ. ಕಾರಣವೆಂದರೆ "ಸಾಮಾಜಿಕ ಜನಜೀವನದ ಮೇಲೆ ಹಿಡಿತವನ್ನು ಹೊಂದಿರುವ ಒಂದು ನೆಲದ ಸಂಸ್ಕೃತಿಯ ಚಿಂತನೆಯ ಧಾರೆಯು ಸೃಜನಶೀಲ ಮನಸ್ಸುಗಳ ಮುಖಾಂತರವಾದರೂ ಭಿನ್ನ ದಾರಿಗಳನ್ನು ಹಿಡಿದಾಗ ನಂತರ ಅದು ಕಾಲ ಕ್ರಮೇಣ ಅಲ್ಲಿನ ಬದುಕಿನ ಕ್ರಮದೊಳಗೆ ಗೋಚರಿಸತೊಡಗುತ್ತದೆ."

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಣ್ಣಕಥಾ ಸಾಹಿತ್ಯದ ಸ್ಥಾನ ಬಹುಮುಖ್ಯವಾದುದು. ಕನ್ನಡದಲ್ಲಿ ಸಣ್ಣಕತೆಯನ್ನು ಒಂದು ಪ್ರಧಾನ ಸಾಹಿತ್ಯ ಪ್ರಕಾರವೆಂದೇ ಗುರುತಿಸುತ್ತೇವೆ. ನಮ್ಮ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ, ಸ್ತ್ರೀವಾದಿ ಕಥನಗಳನ್ನು ನೋಡಿದರೆ ಈ ಅಭಿಪ್ರಾಯ ಸರಿಯೆಂದೇ ಹೇಳಬಹುದು. ಸಮಕಾಲೀನ ಸಾಹಿತ್ಯ ಕ್ಷೇತ್ರದಲ್ಲಿ ಇದಕ್ಕೆ ಅಪೂರ್ವವಾದ ಸ್ಥಾನವೇ ಇದೆಯೆಂಬುದು ವಾಸ್ತವ. 'ಕತೆ' ಎನ್ನುವುದು ನಮ್ಮ ಸಾಂಸ್ಕೃತಿಕ ಬದುಕಿನ

ಅವಿಭಾಜ್ಯ ಅಂಗವೇ ಆಗಿದೆ. ಸಾಮಾಜಿಕ ಬದುಕಿನ ಪ್ರತಿಬಿಂಬವೇ ಆಗಿದೆ. ಕನ್ನಡದ ಕಥನ ಪರಂಪರೆ ಶಕ್ತಿಯುತವಾಗಿದ್ದರೂ ಅದಕ್ಕೆ ಹೊಸ ರೂಪ ದೊರೆತದ್ದು ಪಾಶ್ಚಾತ್ಯ ಮಾದರಿಗಳ ಮುಖಾಂತರ.

ಸ್ವಾತಂತ್ರ್ಯಪೂರ್ವ ಕನ್ನಡ ಕತೆಗಳನ್ನು ಗಮನಿಸಿದಾದ ಆರಂಭದ ಕತೆಗಾರರು ಪಾಶ್ಚಾತ್ಯ ಕಥಾ ಪ್ರಕಾರಗಳಿಗೆ ಆಕರ್ಷಿತರಾದರೂ ಹೊಸ ವಸಾಹತುಶಾಹಿಗೆ ಮುಖಾಮುಖಿಯಾಗುತ್ತಲೇ ಇದ್ದರು. ಹೊಸ ತಲೆಮಾರಿನ ಆಧುನಿಕ ಶಿಕ್ಷಣ ಪಡೆದ ಸಮುದಾಯವನ್ನು ಎದುರಾಗಲು, ಅವರೊಂದಿಗೆ ಸಂವಾದ ಮಾಡಲು ನವೋದಯದ ಕತೆಗಾರರು ಹೊಸ ಹೊಸ ವಿಧಾನಗಳನ್ನು ಕಂಡುಕೊಂಡರು. ಪ್ರಗತಿಶೀಲ ಕತೆಗಾರರು ಯಂತ್ರ ಕೈಗಾರಿಕೆಯ ಬೆಳವಣಿಗೆಯಿಂದ ಸೃಷ್ಟಿಯಾದ ಕಾರ್ಮಿಕ ವರ್ಗ, ಮಾಲೀಕರ ನಡುವಿನ ಸಂಘರ್ಷ, ಗ್ರಾಮೀಣದಿಂದ ನಗರದ ಕಡೆಗೆ ಚಲಿಸುವ ಮನುಷ್ಯನ ಬದುಕಿನಲ್ಲಾದ ಪಲ್ಲಟಗಳನ್ನು, ಉಳಿಗಮಾನ್ಯದಂತಹ ಪದ್ಧತಿಗಳ ವಿರೋಧಿ ಧೋರಣೆಯನ್ನು ಅಭಿವ್ಯಕ್ತಿಸುವ ನೆಲೆಯನ್ನು ಹುಡುಕಿಕೊಂಡರು.

ಸ್ವಾತಂತ್ರ್ಯೋತ್ತರದ ತಲೆಮಾರಿನ ಲೇಖಕರು ಪ್ರತಿಮೆ, ಸಂಕೇತಗಳ ಮೂಲಕ ಮನುಷ್ಯನ ಒಳತೋಟಗಳನ್ನು ಅದರಿಂದ ಪ್ರಭಾವಿತವಾಗಬಲ್ಲ ಹೊರ ಸಮಾಜವನ್ನು ಶೋಧಿಸುವ ಕಡೆಗೆ ಗಮನವನ್ನು ಹರಿಸಿದರು. ದಲಿತ–ಬಂಡಾಯ ಸಂದರ್ಭದಲ್ಲಿ ದೇಶಿಯ ಸತ್ವವನ್ನು ಕತೆಗಳಲ್ಲಿ ಅನಾವರಣಗೊಳಿಸುತ್ತಾ ವರ್ಗ ಸಂಘರ್ಷ, ಜಾತಿ ಸಂಘರ್ಷ, ಯಾಜಮಾನ್ಯ ವಿರೋಧ, ಮೊದಲಾದ ವಾಸ್ತವಗಳನ್ನು ವಿರೋಧಿಸುವ ಕತೆಗಳನ್ನು ಬರೆಯತೊಡಗಿದರು. ನಂತರ ಸ್ತ್ರೀವಾದಿ ಕತೆಗಾರರು ದಲಿತ ಬಂಡಾಯದ ಆಶೋತ್ತರಗಳನ್ನು ಲಿಂಗೀಯ ನೆಲೆಯಲ್ಲಿ ಚರ್ಚೆಗೆ ತೆಗೆದುಕೊಂಡರು, ಪುರುಷಕೇಂದ್ರಿತ ಚಿಂತನೆಗಳನ್ನು ವಿರೋಧಿಸುವ ಕತೆಗಳು ಗಮನಾರ್ಹವಾದವು.

ಆಧುನಿಕೋತ್ತರ ಕನ್ನಡದ ಸಣ್ಣಕತೆಗಳಲ್ಲಿ ಕಾಣುವ ವಸ್ತು ವಿಷಯಗಳು.

1. <u>**ಗ್ರಾಮಜೀವನ:**</u> ಕುಟುಂಬದಲ್ಲಿ ಬದಲಾದ ಶ್ರೇಣೀಕರಣ, ತಲೆಮಾರುಗಳೊಂದಿಗಿನ ಸಂಘರ್ಷ, ಕುಟುಂಬದ ಅಧಿಕಾರ ಕೇಂದ್ರಗಳಲ್ಲಾದ ಪಲ್ಲಟ. ಆರ್ಥಿಕ ಸ್ವಾತಂತ್ರ್ಯ, ಕುಟುಂಬ ವಿಘಟನೆಯ ಸ್ವರೂಪ, ವಿಭಕ್ತ ಕುಟುಂಬಗಳ ಸಾಧ್ಯತೆಗಳು, ಆದರ್ಶ ಕುಟುಂಬದ ಕಲ್ಪನೆ, ರೈತ ಸಮುದಾಯ ಅವರ ಬದುಕು, ಕೃಷಿ, ಜಾತಿ ವ್ಯವಸ್ಥೆಯಲ್ಲಿ ಆಗುತ್ತಿರುವ ಬದಲಾವಣೆಗಳು. ನಗರ ಸಂಸ್ಕೃತಿಯ ಆಕರ್ಷಣೆ, ಗ್ರಾಮೀಣ ಬದುಕಿನ ಅವಸಾನ ಮೊದಲಾದ ಸಂಗತಿಗಳು.
2. <u>**ರಾಜಕೀಯ ವ್ಯವಸ್ಥೆಯ ಬದಲಾದ ಸಮೀಕರಣ:**</u> ಬದಲಾದ ಕಾಲಘಟ್ಟದಲ್ಲಿ ರಾಜಕೀಯ ಸ್ಥಿತ್ಯಂತರಗಳು ವೇಗವಾಗಿ ಘಟಿಸುವಲ್ಲಿ ಆಧುನಿಕೋತ್ತರ ಸಮಾಜದ ಪಾತ್ರ. ಅಧಿಕಾರ ಕೇಂದ್ರಗಳು ಸಮಾಜದ ಹಿಂದುಳಿಯುವಿಕೆಗೆ ಹೇಗೆ ಕಾರಣವಾಗುತ್ತಿವೆ. ಸ್ವಾರ್ಥ ರಾಜಕಾರಣ, ಲಾಭದ ಮನೋಸ್ಥಿತಿ, ನಿಷ್ಠೆ, ಬದ್ಧತೆಯ ಪ್ರಶ್ನೆ, ನೈತಿಕ ಮೌಲ್ಯಗಳ ಪತನ ಮೊದಲಾದವುಗಳು.
3. <u>**ಕಾರ್ಪೋರೇಟ್ ಜಗತ್ತು:**</u> ಬಂಡವಾಳಶಾಹಿ ಮನೋಧರ್ಮ. ಔದ್ಯಮಿಕ ವಲಯದ ಬೆಳವಣಿಗೆ. ಎಲ್ಲವನ್ನೂ ಕೊಂಡುಕೊಳ್ಳುವ ಸಾಮರ್ಥ್ಯ. ಮಧ್ಯಮವರ್ಗದ ಅಭಿರುಚಿಗಳು, ಅಭಿರುಚಿಗಳ ಗುಲಾಮಗಿರಿ, ಜಾಹಿರಾತುಗಳು, ಮಾಧ್ಯಮಗಳು, ಆಳುವ ದೃಷ್ಟಿಕೋನ. ನಗರೀಕರಣ ಪ್ರಕ್ರಿಯೆ, ಪ್ರತಿಭಾ ಪಲಾಯನ, ಅನಾರೋಗ್ಯಕರ ಸ್ಪರ್ಧೆ ಇತ್ಯಾದಿ.
4. <u>**ಲೈಂಗಿಕತೆಯ ಭಿನ್ನ ನಿರ್ವಚನಗಳು:**</u> ಗಂಡು–ಹೆಣ್ಣಿನಲ್ಲಿ ಶೀಲದ ಪ್ರಶ್ನೆ. ಲೈಂಗಿಕತೆಯ ಪರಿಕಲ್ಪನೆ. ಸಾಮಾಜಿಕವಾಗಿ ಅಂಗೀಕೃತವಾಗಿರುವ ಲೈಂಗಿಕ ಸಂಪರ್ಕ, ಸಂತಾನಕ್ರಿಯೆಗಳಲ್ಲಿ ಬಿರುಕು, ವಿವಾಹೇತರ ಸಂಬಂಧಗಳು ಅವುಗಳಿಗಿರುವ ಮಾನ್ಯತೆ. ದಾಂಪತ್ಯದ ಮಡಿವಂತಿಕೆ, ಲೈಂಗಿಕತೆಯ ಬಗೆಗಿನ ಅಭೀಪ್ಸೆ. ಸಮೂಹ ಮಾಧ್ಯಮಗಳು–ಲೈಂಗಿಕ ಉತ್ತೇಜನ ಮುಂತಾದವುಗಳು.

International Research Journal
IJNRD
Research Through Innovation

5. **ಆಧ್ಯಾತ್ಮಿಕ ಒಲವುಗಳಲ್ಲಿ ಪಲ್ಲಟಗಳು:** ದೇವರು, ಧರ್ಮಗಳ ನೆಲೆಗಳು ವಿಸ್ತರಿಸಿಕೊಳ್ಳುತ್ತಿರುವ ಬಗೆಗಳು, ಹೊಸ ವೈಚಾರಿಕತೆಯೊಂದಿಗೆ ಮುಖಾಮುಖಿ. ಅಕ್ಷರಸ್ಥವರ್ಗ ಮತ್ತು ಮೌಢ್ಯಗಳು.

ಈ ಮೇಲಿನ ಐದು ಮುಖ್ಯ ಭಾಗಗಳಲ್ಲಿ ಸಮಾಜದ ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಈ ಸಂಗತಿಗಳು ಎಷ್ಟು ಕಾರಣ. ಈ ಬದಲಾವಣೆಯು ಸಹಜವಾಗಿ ನಡೆಯುತ್ತಿರುವುದೆ ಅಥವಾ ಒತ್ತಾಯ ಪೂರ್ವಕವಾಗಿ ಸಮಾಜವನ್ನು ಆ ದಿಕ್ಕಿನಲ್ಲಿ ದೂಡಲಾಗುತ್ತಿದೆಯೇ ಎಂಬುದನ್ನು ತಿಳಿಯಬಹುದು. ಈ ಪಲ್ಲಟಗಳನ್ನು ಕುರಿತಂತೆ ಕತೆಗಾರರಿಗಿರುವ ಸಹಮತದ ಮತ್ತು ವಿರೋಧಿ ಅಂಶಗಳನ್ನು ಮನಗಾಣಬಹುದು.

ಕನ್ನಡದಲ್ಲಿ ಆಧುನಿಕ ಕಾಲಘಟ್ಟದ ಕನ್ನಡ ಸಣ್ಣಕತೆಗಳು ಕುತೂಹಲಕಾರಿಯಾಗಿ ಇಂದಿಗೂ ಕಾಣತೊಡಗಿವೆ. ನವೋದಯದ ಕಥಾ ಸಾಹಿತ್ಯದಲ್ಲಿ ಪಂಜೆ ಮಂಗೇಶರಾಯರು, ಕೆರೂರು ವಾಸುದೇವಾಚಾರ್ಯ, ಗುಲ್ವಾಡಿಯವರು, ಎಂ.ಎಸ್. ಪುಟ್ಟಣ್ಣನವರು ಒಂದು ಪರಂಪರೆಯನ್ನೇ ಸೃಷ್ಟಿಮಾಡಿದರು. ಕನ್ನಡ ಕಥನ ಪರಂಪರೆಗೆ ಆಧುನಿಕ ವಿಶಿಷ್ಟ ಗದ್ಯ ಕಥನದ ಚೌಕಟ್ಟನ್ನು ನೀಡಿದವರು ಮಾಸ್ತಿಯವರು. ಸಾಮಾನ್ಯ ಮನುಷ್ಯನೇ ಕಥೆಗಳ ಕೇಂದ್ರ ಬಿಂದು. ಅವನ ಬದುಕೇ ಅನ್ವೇಷಣೆಯ ಸ್ಥಳ. ಇವುಗಳನ್ನೇ ಕುವೆಂಪು, ಕಾರಂತ, ಮಾಸ್ತಿಯವರು ಶೋಧಿಸಹೊರಟರು. ವೈವಿಧ್ಯಮಯ ಭಾಷೆ, ಶೈಲಿ, ಕಥಾವಸ್ತು, ನಿರೂಪಣೆ, ತಂತ್ರಗಾರಿಕೆ ಹೊಸದಾಗಿ ಕಥಾ ಪರಂಪರೆಯನ್ನು ಸೇರಿದ ಸಂದರ್ಭ. ಆಧುನಿಕತೆಗೆ ಮುಖಾಮುಖಿಯಾಗುತ್ತಲೇ ಕನ್ನಡದ ದಾರಿಗಳನ್ನು ವಿಸ್ತರಿಸಿದರು. ತಮ್ಮ ಕತೆಗಳ ಮೂಲಕ ಮುಂದಿನವರಿಗೆ ಮಾದರಿಯಾದರು.

ಪ್ರಗತಿಶೀಲರಾದ ಅನಕೃ, ನಿರಂಜನ, ಚದುರಂಗ, ತರಾಸು, ತ್ರಿವೇಣಿ, ಬಸವರಾಜ ಕಟ್ಟೀಮನಿ ಮೊದಲಾದವರು ಪ್ರಗತಿಶೀಲ ಆಶಯಗಳನ್ನು ತಮ್ಮ ಕತೆಗಳ ಮೂಲಕ ಪ್ರಸ್ತುತಪಡಿಸುತ್ತಾ, ಪಾರಂಪರಿಕ ಅಧಿಕಾರ ಕೇಂದ್ರಗಳನ್ನು ಪ್ರಶ್ನಿಸತೊಡಗಿದರು. ಮೌಲ್ಯಗಳನ್ನು ಪ್ರಶ್ನಿಸತೊಡಗಿದರು. ಸಾಮಾಜಿಕ ಅಸಮಾನತೆಯ ವಿರೋಧದ ದನಿಗಳು ಪ್ರಧಾನವಾಗಿ ಗೋಚರಿಸಿದವು. ವರ್ಗ–ವರ್ಣ, ಶೋಷಣೆಗಳ ಭಿನ್ನ ಸ್ವರೂಪವನ್ನು ಈ ಪೀಳಿಗೆಯ ಕತೆಗಾರರ ಕತೆಗಳಲ್ಲಿ ಗಮನಿಸಬಹುದು.

ಪಾಶ್ಚಾತ್ಯರಿಂದ ಪ್ರಭಾವಿತರಾದ ಮುಂದಿನ ನವ್ಯದವರು ಬದುಕಿನ ವೈರುಧ್ಯ ಮತ್ತು ದ್ವಂದ್ವಗಳ ಶೋಧನೆಗೆ ಮುಂದಾದರು. ಇವುಗಳನ್ನು ಪ್ರತಿಮೆ, ಸಂಕೇತಗಳ ಮೂಲಕ ಅಭಿವ್ಯಕ್ತಿಸುತ್ತಾ ಕತೆಗಳ ಭಾಷೆ, ತಂತ್ರ, ಪ್ರಯೋಗ, ನಿರೂಪಣೆಗಳಲ್ಲಿ ಬದಲಾವಣೆಯನ್ನು ತಂದರು. ಲಂಕೇಶ್, ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ತೇಜಸ್ವಿ, ವೀಣಾ ಶಾಂತೇಶ್ವರ, ಕೆ. ಸದಾಶಿವ ಖಾಸನೀಸರು, ಶ್ರೀಕೃಷ್ಣ ಆಲನಹಳ್ಳಿ ಇನ್ನೂ ಹಲವು ಕತೆಗಾರರು ನವ್ಯ ಕತೆಗಳಲ್ಲಿ ಮಾನಸಿಕ ತೊಳಲಾಟ, ಹಳ್ಳಿ–ನಗರ ಬದುಕಿನ ಸಂಬಂಧ, ಹೊಸ ಬದುಕಿನ ಹಂಬಲವನ್ನು ತಮ್ಮ ಕತೆಗಳ ಮೂಲಕ ಬಯಸಿದರು.

ನವ್ಯೋತ್ತರದ ಸಂದರ್ಭದಲ್ಲಿ ಸ್ವಾತಂತ್ರ್ಯೋತ್ತರ ಭಾರತದ ಸ್ಥಿತಿಯನ್ನು ಹೇಳುವ ಬದಲಾದ ಸಮಾಜದ ಚಿತ್ರಣ, ಗ್ರಾಮಭಾರತದಲ್ಲಿ ಆಗುತ್ತಿದ್ದ ಪಲ್ಲಟಗಳು, ಅಸಹಾಯಕತೆ, ಬಡತನ, ಸಾಮಾಜಿಕ ಸಮಸ್ಯೆಗಳು ಪ್ರಧಾನ ಕಥಾ ವಸ್ತುಗಳಾದವು. ಬೆಸಗರಹಳ್ಳಿ ರಾಮಣ್ಣ, ದೇವನೂರು ಮಹಾದೇವ, ಕುಂ.ವೀರಭದ್ರಪ್ಪ, ಗೀತ ನಾಗಭೂಷಣ, ಬಿ.ಟಿ.ಲಲಿತಾನಾಯಕ್, ಬರಗೂರು ರಾಮಚಂದ್ರಪ್ಪ, ಅಮರೇಶ ನುಗಡೋಣಿ, ಮೊಗಳ್ಳಿ ಗಣೇಶ, ಕಾಳೇಗೌಡ ನಾಗವಾರ, ಚೆನ್ನಣ್ಣ ವಾಲೀಕಾರ, ಬೋಳುವಾರು ಮಹಮ್ಮದ್ ಕುಂಞ, ಫಕೀರ ಮಹಮ್ಮದ್ ಕಟ್ಪಾಡಿ, ಸಾರಾ ಅಬೂಬಕರ್ ಹೊಸ ಸಂವೇದನೆಗಳನ್ನು ಸಮುದಾಯದ ನೆಲೆಯಲ್ಲಿ ಚಿಂತಿಸುತ್ತಾ ವೈಚಾರಿಕ ಪ್ರಜ್ಞೆಯನ್ನು, ಪ್ರಜಾಪ್ರಭುತ್ವದ ತತ್ವಗಳನ್ನು ಕತೆಗಳಲ್ಲಿ ತಂದರು.

International Research Journal
Research Through Innovation

ಜಮೀನ್ದಾರಿ, ಪುರೋಹಿತಶಾಹಿ, ಆಳುವ ವರ್ಗದ, ಪುರುಷ ಪ್ರಾಧಾನ್ಯತೆಯ ವಿರೋಧಿ ದನಿಗಳು ಈ ಸಂದರ್ಭದಲ್ಲಿ ಕತೆಗಳ ಪ್ರಧಾನ ವಸ್ತುಗಳೆನಿಸಿದವು. ಮಾನವೀಯತೆಯ ಹುಡುಕಾಟದ, ಸ್ತ್ರೀ ಸಂವೇದನೆಯ, ಬಂಡಾಯದ ಮನೋಧರ್ಮದ, ದಲಿತರ ಶೋಷಣೆಯ ವಿವಿಧ ಮುಖಗಳನ್ನು ಸಮಾಜದ ಮುಂದಿಟ್ಟರು.

ದಲಿತ–ಬಂಡಾಯದ ಕಾಲದಲ್ಲಿ ಕತೆಗಳನ್ನು ಆರಂಭಿಸಿ ಈಗಲೂ ಬರೆಯುತ್ತಿರುವ ವೈದೇಹಿ, ವಿವೇಕ ಶಾನಭಾಗ, ರಾಘವೇಂದ್ರ ಪಾಟೀಲ, ಹೆಚ್, ನಾಗವೇಣಿ, ಅರವಿಂದ ಮಾಲಗತ್ತಿ, ಭಾನುಮುಷ್ತಾಕ್, ಜಯಂತ ಕಾಯ್ಕಿಣಿ, ಅಬ್ದುಲ್ ರಶೀದ್, ಎಸ್. ದಿವಾಕರ, ಕೆ. ಸತ್ಯನಾರಾಯಣ ಮೊದಲಾದವರು ನವ್ಯ–ನವ್ಯೋತ್ತರದ ವಿಸ್ತರಣೆಯಾಗಿ ಬರೆಯುತ್ತಿರುವವರಾಗಿದ್ದಾರೆ.

ವಸಾಹತುಶಾಹಿ ನವೋದಯದ ನೂರು ವರ್ಷದ ನಂತರ ಕನ್ನಡ ಕಥಾ ಜಗತ್ತಿಗೆ ಬಂದ ಜಾಗತೀಕರಣ, ವಾಣಿಜ್ಯೀಕರಣ, ಉದಾರೀಕರಣ, ತಂತ್ರಜ್ಞಾನ, ಅಭಿವೃದ್ಧಿಯ ವಿವಿಧ ಮಾದರಿಗಳು ಅವುಗಳ ಸ್ವೀಕರಣ, ಹೊಸ ಸವಾಲುಗಳು, ಬದಲಾದ ಜೀವನ ಕ್ರಮಗಳನ್ನು ಈ ತಲೆಮಾರಿನಲ್ಲಿ ಬರೆಯುತ್ತಿರುವ ಕತೆಗಾರರು ಮುಖಾಮುಖಿಯಾಗುತ್ತಿದ್ದಾರೆ. ಎಮ್.ಎಸ್ ಶ್ರೀರಾಮ್, ಸುಮಂಗಲಾ, ಡಾ.ವಿನಯಾ, ಕೇಶವ ಮಳಗಿ, ಆನಂದ ಋಗ್ವೇದಿ, ವಸುದೇಂಧ್ರ, ಎಲ್.ಸಿ.ಸುಮಿತ್ರ, ನಾಗರಾಜ ವಸ್ತಾರೆ, ಕಲಿಗಣನಾಥ ಗುಡದೂರು, ಸುನಂದಾ ಪ್ರಕಾಶ ಕಡಮೆ, ಕೇಶವರೆಡ್ಡಿ ಹಂದ್ರಾಳ, ನಟರಾಜ್ ಹುಳಿಯಾರ್, ಅಶೋಕ ಹೆಗಡೆ, ಆನಂದ್ ಋಗ್ವೇದಿ, ಎಲ್ ಜಿ ಮೀರಾ, ಇನ್ನೂ ಹಲವರು ಈ ಸಂದರ್ಭದ ಮುಖ್ಯ ಕತೆಗಾರರೆನಿಸಿದ್ದಾರೆ.

## <u>ಪರಾಮರ್ಶನ ಕೃತಿಗಳು.</u>

1. ಸ್ವಾತಂತ್ರೋತ್ತರ ಕನ್ನಡ ಸಾಹಿತ್ಯ–
ಪ್ರ.ಸಂ: ಎಲ್.ಎಸ್.ಶೇಷಗಿರಿರಾವ್,ಉದಯ ಭಾನು ಕಲಾ ಸಂಘ, ಬೆಂಗಳೂರು 1993.

2. ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು–
ಸಂ: ವಿನಯ್ ಲಾಲ್ ಮತ್ತು ಆಶೀಶ್ ನಂದಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, 2007.

3. ಆಧುನಿಕೋತ್ತರವಾದ–
ಪ್ರೊ: ಐಜಾಜ್ ಅಹಮದ್, ಕನ್ನಡಕ್ಕೆ: ಕೆ. ಪ್ರಕಾಶ್, ಚಿಂತನ ಪುಸ್ತಕ, ಬೆಂಗಳೂರು, 2012.

4. ಸಣ್ಣಕತೆಯ ಹೊಸ ಒಲವುಗಳು–
ಗಿರಡ್ಡಿ ಗೋವಿಂದರಾಜ, ಸಂಕ್ರಮಣ ಪ್ರಕಾಶನ, ಧಾರವಾಡ, 1965

5. W.T.O. ಜಾಗತೀಕರಣ ಮತ್ತು ಗ್ರಾಮಭಾರತ–
ಡಾ. ಎನ್. ಜಗದೀಶ್ ಕೊಪ್ಪ, ಸಿಂಚನ ಗ್ರಂಥಮಾಲೆ, ಹಾವೇರಿ, 2014.

6. ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ -
ಡಾ. ಎನ್.ಕೆ. ಕೋದಂಡರಾಮ, ಗಾಯತ್ರಿ ಸ್ಮಾರಕ ಗ್ರಂಥಮಾಲೆ. ಮೈಸೂರು, 1996.